IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)
An International Open Access, Peer-reviewed, Refereed Journal

# ವಿಷಯ : ಸ್ಥಳೀಯ ಭಾಷೆಗಳು ಮತ್ತು ನೂತನ ಶಿಕ್ಷಣ ನೀತಿ

## ( Local Language and New Education Policy)

**Dr. Lokesha R**
**Asst. professor of Kannada**
**Dr. K Shivarama Karanta Govt. First Grade College**
**Bellare (Peruvaaje), Sullia (TQ), Dakshina kannada (Disrict)-574212**
**Karnataka (State), India**

## ಪೀಠಿಕೆ :

ಆಧುನಿಕ ಶಿಕ್ಷಣವು ಹೊಸ ಹೊಸ ಗುರಿ ಮತ್ತು ಉದ್ದೇಶಗಳೊಂದಿಗೆ ರಾಷ್ಟ್ರೀಯ ಕಾಳಜಿಯಾಗಿ ಇಂದು ಪರಿಣಮಿಸುತ್ತಿದೆ. ನಾಗರಿಕತೆಯ ಆದಿಯಿಂದಲೂ ಮಾನವ ಸಮಾಜದ ಮೇಲೆ ಶಿಕ್ಷಣ ತನ್ನ ಪ್ರಭಾವ ಬೀರುತ್ತಲೇ ಬಂದಿದೆ. ನಾವಿಂದು ಬದುಕುತ್ತಿರುವ ಜಗತ್ತು ತೃತೀಯ ಜಗತ್ತು ಹಾಗಾಗಿ ಅಪ್ಪ ಹಾಕಿದ ಆಲದ ಮರದ ಕೆಳಗೆ ಬದುಕುವ ಕಾಲ ಇಂದಿನದಲ್ಲ. ಮಾನವ ನಾಗರಿಕತೆಯ ಪ್ರಾರಂಭದಿಂದಲೂ ಶಿಕ್ಷಣದ ರೂಪುರೇಖೆಗಳು ಬದಲಾಗುತ್ತಲೇ ಬಂದಿವೆ. ಅದು ಎಲ್ಲಾ ಕಾಲಮಾನಕ್ಕೂ ಅನ್ವಯ. ಈ ನೆಲೆಯ ಒಳಗೆ ನೋಡಿದಾಗ ಸಾಂಪ್ರದಾಯಿಕ ಶಿಕ್ಷಣ ಪದ್ಧತಿಗಳು ಕಣ್ಮರೆಯಾಗಿ ಇಂದು ನವೀನ ಶಿಕ್ಷಣ ನೀತಿಗಳು ರೂಪುಗೊಳ್ಳುತ್ತಿವೆ. ಇದು ಯಾವುದೇ ಜೀವಂತ ಸಮಾಜದ ಲಕ್ಷಣವಾಗಿದೆ ಎಂದರೆ ತಪ್ಪಾಗದು. ಆಧುನಿಕತೆಯ ಭರಾಟೆಯಲ್ಲಿ ತೃತೀಯ ಜಗತ್ತಿನ ರಾಷ್ಟ್ರಗಳು ಹೊಸ ಹೊಸ ಶಿಕ್ಷಣ ನೀತಿಗಳನ್ನು ರೂಪಿಸುವುದರೊಂದಿಗೆ ಅಭಿವೃದ್ಧಿ ಸಾಧಿಸಿರುವುದು ತಿಳಿದ ವಿಷಯ. ಇದು ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಕ್ಕೂ ಅಗತ್ಯ ಹಾಗಾಗಿಯೇ ಸ್ವತಂತ್ರ ಭಾರತದ ತರುವಾಯ ಅನೇಕ ಶಿಕ್ಷಣ ನೀತಿಗಳು ನಮ್ಮಲ್ಲಿ ರೂಪುಗೊಂಡಿವೆ. ಅವು ಹಾಗೇ ಜಡವಾಗಿ ಉಳಿದಿಲ್ಲ. ಅವುಗಳಲ್ಲಿ ಕಾಲಮಾನಕ್ಕೆ ಹೊಂದಿಕೊಳ್ಳುವ ಮಾರ್ಪಾಟುಗಳು ನಡೆಯುತ್ತಲೇ ಇದೆ. ಅದು ರಾಷ್ಟ್ರೀಯ ಶಿಕ್ಷಣ ನೀತಿ-**2020** ರಲ್ಲೂ ಕಂಗೊಳಿಸಿದೆ. ಈ ನೀತಿಯ ನೆಲೆಗಟ್ಟಿನಲ್ಲಿ ಸ್ಥಳೀಯ ಭಾಷೆಗಳು ಮತ್ತು ನೂತನ ಶಿಕ್ಷಣ ನೀತಿಯ ಕುರಿತ ಕೆಲವೊಂದು ಚಿಂತನೆಗಳ ಪ್ರಸ್ತುತತೆಯನ್ನು ಈ ಮುಂದೆ ಚರ್ಚಿಸಲಾಗಿದೆ.

## ಸ್ಥಳೀಯ ಭಾಷೆಗಳು ಮತ್ತು ನೂತನ ಶಿಕ್ಷಣ ನೀತಿ :

ಯಾವುದೇ ಸಮಾಜದ ಜೀವಂತಿಕೆ ಇರುವುದು ಆ ಸಮಾಜಲ್ಲಿ ಮಾತಾಡುವ ಭಾಷೆಯ ಮೇಲೆ. ಅದು ತನ್ನ ಭಾಷೆಯನ್ನು ಬಳಕೆಗೆ ತರದಿದ್ದಲ್ಲಿ ಆ ಸಮಾಜ ಮತ್ತು ಭಾಷೆ ಎರಡೂ ಅಳಿವಿನ ಹಾದಿ ಹಿಡಿಯುತ್ತವೆ. ಅದನ್ನು ಜಗತ್ತಿನ ಅನೇಕ ಭಾಷಾ ತಜ್ಞರು ಭಾಷೆಗಳ ಅವನತಿಯ ಅಧ್ಯಯನ ಕುರಿತ ಸಂಶೋಧನೆಯಲ್ಲಿ ನಿರೂಪಿಸುತ್ತಲೇ ಬಂದಿದ್ದಾರೆ. ಅಂತಹ ಸನ್ನಿವೇಷಗಳು ನಿರ್ಮಾಣವಾಗದಿರಲು ನಾವು ಎಚ್ಚರಿಕೆ ವಹಿಸಬೇಕಾದ ಸ್ಥಿತಿ ಇಂದು ಬಂದೊದಗಿದೆ. ಈ ನಿಟ್ಟಿನಲ್ಲಿ ಶಿಕ್ಷಣ ನೀತಿಗಳ ಕಾರ್ಯ ಯೋಜನೆಗಳು ಬಹು ಮುಖ್ಯ ಪಾತ್ರ ವಹಿಸುತ್ತವೆ. ಅವುಗಳಲ್ಲಿ ಭಾಷೆಗಳನ್ನು ಕುರಿತ ಚಿಂತನೆಗಳ ಒಳಗೊಳ್ಳುವಿಕೆ ಅಷ್ಟೇ ಗುರುತರವಾದುದಾಗಿದೆ.

ಯಾವುದೇ ಒಂದು ನೀತಿ ಜಾರಿಯಾದಾಗ ಅದರ ಬಗ್ಗೆ ಪರವಾದ ನಿಲುವುಗಳಿಗಿಂತ ವಿರೋಧವಾದ ನಿಲುವುಗಳೇ ಹೆಚ್ಚು ಮುನ್ನೆಲೆಗೆ ಬರುತ್ತವೆ. ಅದು ಈ ರಾಷ್ಟ್ರೀಯ ಶಿಕ್ಷಣ ನೀತಿಯ ಯೋಜನೆಗೂ ಹೊರತಲ್ಲ. ರಾಷ್ಟ್ರೀಯ ಶಿಕ್ಷಣ ನೀತಿಯ ಧ್ಯೇಯವಿರುವುದು " ಭಾರತ ಕೇಂದ್ರಿತ ವ್ಯವಸ್ಥೆಯೊಂದಿಗೆ ಸರ್ವರಿಗೂ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುವ ಮೂಲಕ ನಮ್ಮ ಸಮಾಜವನ್ನು ಒಂದು ಸುಸ್ಥಿರ, ಸಮಾನ ಹಾಗೂ ಜೀವಂತಿಕೆಯುಳ್ಳ ಸಮಾಜವನ್ನಾಗಿ ಮಾರ್ಪಡಿಸಲು ಶ್ರಮಿಸುತ್ತದೆ." ಎನ್ನುವುದರಲ್ಲಿ. ಅದು ಚಾಚು ತಪ್ಪದೆ ನೆರವೇರಬೇಕು, ಒಂದು ವೇಳೆ ಇದು ಸಾಧಿತವಾಗದೆ ಹೋದರೆ ಅಭಿವೃದ್ಧಿ ಕುಂಠಿತಗೊಳ್ಳುತ್ತದೆ. ಮೇಲಿನ ಧ್ಯೇಯ ವಾಕ್ಯಗಳಲ್ಲಿನ ' ಜೀವಂತಿಕೆಯುಳ್ಳ ಸಮಾಜವನ್ನು ಮಾರ್ಪಡಿಸಲು ಶ್ರಮಿಸುತ್ತದೆ ' ಎನ್ನುವ ಮಾತುಗಳು ಬಹಳ ಮುಖ್ಯವಾಗುತ್ತವೆ ,ಅಂದರೆ ಜೀವಂತಿಕೆಯುಳ್ಳ ಎನ್ನುವಲ್ಲಿ ಸ್ಥಳೀಯ ಭಾಷೆಗಳ ಉಳಿವು ಮತ್ತು ಬೆಳೆವಣಿಗೆಯನ್ನು ಕೂಢ ಒಳಗೊಂಡಿದೇ ಎಂದೇ ಅರ್ಥ. ಇದನ್ನು ಬದಿಗೊತ್ತಿದರೆ ಇಡೀ ಶಿಕ್ಷಣ ನೀತಿಯ ಆಶಯವೇ ಬುಡಮೇಲಾಗುತ್ತದೆ. ಹಾಗಾಗಿಯೇ ಸ್ಥಳೀಯ ಭಾಷೆಯ ಅಭಿವೃದ್ಧಿ ಮತ್ತು ಬೆಳೆವಣಿಗೆಯಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸಲು ಮುಂದಾಗಿದೆ ಎನ್ನಬಹುದು.

ಕಳೆದ ಒಂದು ವರುಷಗಳಿಂದ ಈ ವಿಷಯ ಕುರಿತ ಚರ್ಚೆ ನಡೆಯುತ್ತಲೆ ಇದೆ. ರಾಷ್ಟ್ರೀಯ ಶಿಕ್ಷಣ ನೀತಿಯಿಂದ ಅನೇಕ ಭಾರತೀಯ ಭಾಷೆಗಳು ಅವನತಿಯ ಹಾದಿ ಹಿಡಿಯುತ್ತವೆ ಎಂಬ ಕೂಗು ಎಲ್ಲಡೆ ಕೇಳುತ್ತಲೇ ಇದೆ. ಆದರೆ ಸಮಗ್ರವಾಗಿ ಪರಿಶೀಲಿಸಿದರೆ ಈ ಮಾತು ಸತ್ಯಕ್ಕೆ ದೂರ ಎಂದೆನಿಸುತ್ತದೆ. ಅದನ್ನು ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ನಿರೂಪಿತವಾಗಿರುವ ಅಂಶಗಳಿಂದಲೇ ಕಂಡುಕೊಳ್ಳಬಹುದು. ಬಹುಭಾಷೀಯತೆ ಮತ್ತು ಭಾಷಾಶಕ್ತಿ ಕುರಿತ ಶಿಕ್ಷಣ ನೀತಿಯ ನಿಲುವುಗಳನ್ನು ಇಲ್ಲಿ ಚರ್ಚೆಗೆ ಒಳಗು ಮಾಡಿದರೆ ಅದರ ವಾಸ್ತವಿಕತೆ ತೆರೆದುಕೊಳ್ಳುತ್ತದೆ. " ಮನೆಭಾಷೆಯೆಂದರೆ ಸಾಧಾರಣವಾಗಿ ಮಾತೃಭಾಷೆ ಅಥವಾ ಸ್ಥಳೀಯ ಸಮುದಾಯಗಳು ಆಡುವ ಭಾಷೆಯೇ ಆಗಿರುತ್ತದೆ. ಇಷ್ಟಾದರೂ ವಾಸ್ತವ ಸಂಗತಿ ಏನೆಂದರೆ ಅನೇಕ ವೇಳೆ ಬಹುಭಾಷಿ ಕುಟುಂಬಗಳಲ್ಲಿ ಮನೆಯ ಕೆಲವರು ತಮ್ಮದೇ ವಿಶಿಷ್ಟವಾದ ಮನೆ ಮಾತನ್ನು ಬಳಕೆ ಮಾಡಬಹುದು. ಈ ಭಾಷೆ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಗಿಂತ ಬೇರೆಯದೇ ಆಗಿರಬಹುದು. ಸಾಧ್ಯವಾದಷ್ಟು ಮಟ್ಟಿಗೆ ಕಡೇಪಕ್ಷ ಐದನೆಯ ತರಗತಿಯವರೆಗೆ ಅಥವಾ ಅದಕ್ಕಿಂತಲೂ ಮುಂದೆ ಎಂದರೆ ಎಂಟನೆಯ ತರಗತಿವರೆಗೆ ಅಥವಾ ಅದಕ್ಕಿಂತಲೂ

ಮುಂದೆ ಶಿಕ್ಷಣದ ಮಾಧ್ಯಮದ ಭಾಷೆ/ ಮಾತೃಭಾಷೆ/ ಸ್ಥಳೀಯ ಭಾಷೆ/ ಪ್ರಾದೇಶಿಕ ಭಾಷೆ ಆಗಿರಬೇಕು. ಇದಾದ ಅನಂತರ ಸಾಧ್ಯವಾದಷ್ಟು ಮಟ್ಟಿಗೆ ಮನೆಭಾಷೆ/ ಸ್ಥಳೀಯ ಭಾಷೆಯನ್ನು ಒಂದು ಭಾಷೆಯಾಗಿ ಓದುವಂತೆ ಅವಕಾಶ ಇರತಕ್ಕದ್ದು. ಸರ್ಕಾರಿ ಹಾಗೂ ಖಾಸಗಿ ಎರಡೂ ಬಗೆಯ ಶಾಲೆಗಳಲ್ಲಿ ಇದನ್ನು ಜಾರಿಗೆ ತರಲಾಗುತ್ತದೆ. ವಿಜ್ಞಾನ ಸೇರಿದಂತೆ ಎಲ್ಲಾ ವಿಷಯಗಳಲ್ಲೂ ಉಚ್ಚಮಟ್ಟದ ಪಠ್ಯಪುಸ್ತಕಗಳನ್ನು ಮನೆಭಾಷೆಯಲ್ಲಿ/ಸ್ಥಳೀಯ ಭಾಷೆಯಲ್ಲಿ ದೊರಕಿಸಿಕೊಡಲಾಗುವುದು .ಒಂದು ವೇಳೆ ಮಗು ಆಡುವ ಭಾಷೆ ಹಾಗೂ ಶಿಕ್ಷಣ ಮಾಧ್ಯಮ ಇವೆರಡೂ ಎಲ್ಲಿಯೇ ಆದರೂ ಬೇರೆಯಾಗಿದ್ದರೆ, ಅಂತೆಡೆಗಳಲ್ಲಿ ಈ ಕೊರತೆಯನ್ನು ತುಂಬುವ ಪ್ರಯತ್ನ ಮಾಡಲಾಗುವುದು." ( ರಾ. ಶಿ. ನೀತಿ-**2020.** ಪುಟ-**20**) ಎನ್ನುವ ಮಾತುಗಳಲ್ಲಿ ಸ್ಥಳೀಯ ಭಾಷೆಗಳ ಮಹತ್ವ ಅಡಗಿದೆ. ಯಾವುದೇ ಸಮಾಜದ ಜೀಂತಿಕೆ ಇರುವುದು ಅಲ್ಲಿನ ಸ್ಥಳೀಯ ಭಾಷೆ ಮತ್ತು ಸಂಸ್ಕೃತಿಯಲ್ಲಿ, ಅದನ್ನು ಬಿಟ್ಟು ಯಾವುದೇ ನೀತಿಗಳು ರೂಪುಗೊಳ್ಳಲು ಸಾಧ್ಯವಿಲ್ಲ. ಅದು ಈ ಶಿಕ್ಷಣ ನೀತಿಯ ಬಹು ಮುಖ್ಯ ಗುರಿ ಮತ್ತು ಉದ್ದೇಶ ಕೂಡ ಆಗಿರುವುದು. ಈ ಸ್ಥಳೀಯ ತತ್ತ್ವವನ್ನು ಅನುಸರಿಸಿಯೇ ಅದು ಸಾಗಬೇಕು. ಅದು ಇಲ್ಲಿಯೂ ಕೂಡ ಗೋಚರವಾಗುವ ತತ್ತ್ವವೇ ಆಗಿದೆ.

ಶಿಕ್ಷಣ ಮಾಧ್ಯಮ ಬಹುಮುಖ್ಯವಾದ ಆಯಾಮಗಳಲ್ಲಿ ಒಂದು. ಅದು ಎಲ್ಲ ಶಿಕ್ಷಣ ನೀತಿಯ ಅಡಿಗಲ್ಲಾಗಬೇಕು. ಅದನ್ನು ಅನೇಕ ವಿದ್ವಾಂಸರು, ಶಿಕ್ಷಣ ತಜ್ಞರು ಹೇಳುತ್ತಲೇ ಬಂದಿದ್ದಾರೆ. ಹಾಗಾಗಿಯೇ ಮಹಾತ್ಮಗಾಂಧಿ ಅವರು ಮೂಲ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದರು. ಮಗುವಿನ ಪ್ರಾಥಮಿಕ ಶಿಕ್ಷಣ ಮಾತೃಭಾಷೆಯಲ್ಲಿಯೇ ನಡೆಯಬೇಕೆಂದು ಸಾರಿದರು. ಶಿಕ್ಷಣ ಮಾಧ್ಯಮ ಕುರಿತು ಭಾರತದ ಪ್ರಧಾನಿಯಾಗಿದ್ದ ಪಂಡಿತ್ ನೆಹರು " ಭಾರತದಲ್ಲಿ ಇಂಗ್ಲಿಷ್ ಇನ್ನು ಮುಂದೆ ಪ್ರಮುಖ ಶಿಕ್ಷಣ ಮಾಧ್ಯಮವಾಗಿರುವುದನ್ನು ನಾನು ಅರ್ಥಮಾಡಿಕೊಳ್ಳಲಾರೆ, ಅದು ಹಿಂದಿ ಅಥವಾ ಇನ್ನಾವುದಾದರೂ ಪ್ರಾಂತ್ಯ ಭಾಷೆಯೇ ಆಗಬೇಕು. ಆಗ ಮಾತ್ರ ನಾವು ನಮ್ಮ ಜನಜೀವನದೊಡನೆ ಸಂಪರ್ಕವನ್ನಿಟ್ಟುಕೊಳ್ಳುವುದು ಸರ್ವತೋಮುಖವಾದ ಬೆಳವಣಿಗೆಗೆ ನೆರವಾಗುವುದು ಸಾಧ್ಯವಾಗುತ್ತದೆ." ( ಉದ್ಧೃತ-ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ, ಪುಟ-**346**) ಎಂದದ್ದು ಪ್ರಾದೇಶಿಕ ಬಾಷೆಗಳ ಮೇಲೂ ಪ್ರಭಾವ ಬೀರಿತು. ಅದು ಇಂದಿಗೂ ಪ್ರಸ್ತುತವೇ ಆಗಿದೆ.

ಯಾವುದೇ ಸಮಾಜದ ಚಲನೆ ನಿಂತಿರುವುದು ಸ್ಥಳಿಯ ಸಂಪತ್ತಿನ ಮೇಲೆ ಅದು ಭಾಷೆಗೂ ಅನ್ವಯ. ಅದನ್ನು ಹೊರತುಪಡಿಸಿ ಅಭಿವೃದ್ಧಿ ಸಾಧ್ಯವಿಲ್ಲವೆಂಬುದನ್ನು ಅನೇಕ ಮಾತುಗಳು ನಿರೂಪಿಸುತ್ತವೆ. " ಐವತ್ತು ವರ್ಷದ ಹಿಂದೆ ಸರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಜಪಾನಿಗೆ ಹೋದಾಗ ಅಲ್ಲಿ ವಿಶ್ವವಿದ್ಯಾನಿಲಯಗಳ ಅಧ್ಯಾಪಕರು ಇಂಗ್ಲಿಷ್ ಪುಸ್ತಕಗಳನ್ನು ಓದಿಕೊಂಡು ಜಪಾನಿ ಭಾಷೆಯಲ್ಲಿ ಪಾಠ ಹೇಳಿಕೊಡುತ್ತಿದ್ದರಂತೆ. ವಿದ್ಯಾರ್ಥಿಗಳು ಇಂಗ್ಲಿಷ್ ಪುಸ್ತಕಗಳನ್ನು ಓದಿಕೊಂಡು ಸಂಗತಿಗಳನ್ನು ಕಲಿಯುತ್ತಿದ್ದರು. ಹೀಗೆ ಮಾಡಿದ ಜಪಾನ್ ಹೊಸ ಕಾಲದ ವಿದ್ಯೆಯಲ್ಲಿ ಎಷ್ಟು ಮುಂದುವರೆಯಿತು ಎಂಬುದನ್ನು......... ಇಂಗ್ಲಿಷ್ ಭಕ್ತರು ನೆನೆಯಬೇಕು." (ಉದ್ಧೃತ-ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ, ಪುಟ-**347**) ಅನ್ನುವ ಮಾತುಗಳು ಸ್ಥಳಿಯ ಭಾಷೆಗಳ ಮಹತ್ವ ಮತ್ತು ಅಭಿವೃದ್ಧಿಯಲ್ಲಿ ಅವುಗಳ ಪಾತ್ರವನ್ನು

ಸಾರುತ್ತವೆ . ಇಂಥ ಅಂಶಗಳ ಕಡೆಗೆ ಹೊಸ ಶಿಕ್ಷಣ ನೀತಿಯಲ್ಲಿ ಅವಕಾಶವಿದೆ. ಅದನ್ನು ಜಾರಿಗೆ ತರುವ ಮೂಲಕ ಸಾಕಾರಗೊಳಿಸಬೇಕಾದ ಜರೂರು ಇಂದು ಅತ್ಯಗತ್ಯವಾಗಿದೆ. ಈ ಮೇಲಿನ ಚರ್ಚಿತ ವಿಷಯಗಳಿಗೆ ಪೂರಕವಾದ ಅಂಶಗಳು ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಯೋಜನಾಬದ್ಧವಾಗಿ ನಿರೂಪಿತವಾಗಿರುವುದನ್ನು ಗಮನಿಸಬಹುದು. □ದು ಕೆಳಕಂಡಂತಿದೆ.

## ಸ್ಥಳೀಯ ಭಾಷೆ ಬಗೆಗೆ ಮಹತ್ವ ನೀಡಿರುವ ಪೂರಕ ಅಂಶಗಳು :

1. ಸುಸ್ಥಿರ ಬೆಳೆವಣಿಗೆ ಕಾರ್ಯಸೂಚಿ-2030 ರ ಈಡೇರಿಕೆಗೆ ಅಗತ್ಯವಾದ ಸ್ಥಳಿಯ ಸಂಪತ್ತಿನ ಬಳಕೆಗೆ ಗಮನ ನೀಡುವುದು.
2. ಭಾರತೀಯ ಪರಂಪರೆ ಮತ್ತು ಮೌಲ್ಯವ್ಯವಸ್ಥೆಯ ಆಧಾರದ ಮೇಲೆ ಈ ಶಿಕ್ಷಣ ನೀತಿಯನ್ನು ರೂಪಿಸಲಾಗಿದೆ ಎಂಬುದು.
3. ಮನೆಭಾಷೆ ಮತ್ತು ಮಾತೃಭಾಷೆಯನ್ನು ಪ್ರಾರಂಭದ ತರಗತಿಗಳಲ್ಲಿ ಹೆಚ್ಚು ಕಲಿಯುವಂತೆ ಮಾಡುವುದು.
4. ಮನೆಭಾಷೆ/ ಮಾತೃಭಾಷೆ ಹಾಗೂ ಶಿಕ್ಷಣ ಮಾಧ್ಯಮ ಬೇರೆ ಬೇರೆಯಾಗಿರುವಂತಹ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಹಾಗೆ ಅಧ್ಯಾಪಕರು ದ್ವಿಭಾಷೆ ಕಲಿಕೆ ಸಾಮಾಗ್ರಿಯನ್ನು ಬಳಕೆ ಮಾಡುವ ಮೂಲಕ ದ್ವಿಭಾಷೆ ನಡೆಯನ್ನು ಅನುಸರಿಸುವಂತೆ ಪ್ರೋತ್ಸಾಹಿಸಲಾಗುವುದು.
5. ಸಂಶೋಧನೆಗಳು ಸ್ಪಷ್ಟವಾಗಿ ನಿರೂಪಿಸುವಂತೆ ಮಕ್ಕಳು 2 ವರ್ಷದಿಂದ 8 ವರ್ಷಗಳ ವಯೋಮಾನದ ನಡುವೆ ಬಹಳ ಬೇಗ ಭಾಷೆಯನ್ನು ಕಲಿಯುತ್ತಾರೆ. ಬಹುಭಾಷಿಕತೆಯಿಂದ ಈ ವಯಸ್ಸಿನ ಮಕ್ಕಳಿಗೆ ಬಹಳ ಹೆಚ್ಚಿನ ಮಟ್ಟಿಗೆ ಸಂಜ್ಞಾತ್ಮಕ ಪ್ರಯೋಜನಗಳು ದೊರೆಯುತ್ತವೆ. ಹಾಗಾಗಿ ಮಕ್ಕಳಿಗೆ ಬೇರೆ ಬೇರೆ ಭಾಷೆಗಳ ವಾತವರಣವನ್ನು ಒಡ್ಡುವಂತೆ ಮಾಡುವುದು.
6. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ದೇಶಾದ್ಯಂತ ಎಲ್ಲ ಕ್ಷತ್ರಿಯ ಭಾಷೆಗಳಲ್ಲಿ ಅದರಲ್ಲೂ ಸಂವಿಧಾನದ ಎಂಟನೆಯ ಅನುಸೂಚಿಯಲ್ಲಿ ಉಲ್ಲೇಖಿತವಾಗಿರುವ ಎಲ್ಲ ಭಾಷೆಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಭಾಷಾ ಶಿಕ್ಷಕರನ್ನು ನೇಮಿಸಿಕೊಳ್ಳು ದೊಡ್ಡ ಪ್ರಯತ್ನ ಮಾಡಲಾಗುವುದು.
7. ಸಂವಿಧಾನದಲ್ಲಿ ಒದಗಿಸಲಾದ ಅವಕಾಶಗಳು, ಜನಸ್ತೋಮದ, ಪ್ರದೇಶಗಳ ಹಾಗೂ ಕೇಂದ್ರದ ಆಸೆ ಆಕಾಂಕ್ಷೆಗಳನ್ನು, ಬಹುಭಾಷಿಯತೆಯನ್ನು ಮತ್ತು ರಾಷ್ಟ್ರೀಯ ಏಕತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಇವುಗಳಿಗೆ ಇಂಬು ನೀಡುವ ಸಲುವಾಗಿ ತ್ರಿಭಾಷಾ ಸೂತ್ರದ ಅಳವಡಿಕೆಯನ್ನು ಮುಂದುವರೆಸಲಾಗುವುದು.
8. ತ್ರಿಭಾಷಾ ಸೂತ್ರದ ಅನ್ವಯ ಹೆಚ್ಚಿನ ಮುಕ್ತತೆಯಿರುವಂತೆ ನೋಡಿಕೊಳ್ಳುವುದು. ಯಾವುದೇ ರಾಜ್ಯದ ಮೇಲೆ ಯಾವುದೇ ಭಾಷೆಯನ್ನು ಬಲವಂತವಾಗಿ ಹೇರದಿರುವಂತೆ ನೋಡಿಕೊಳ್ಳುವುದು.
9. ಮಕ್ಕಳು ಕಲಿಯುವ ಮೂರು ಭಾಷೆಗಳ ಪೈಕಿ ಆಯ್ಕೆ ಆಯಾ ರಾಜ್ಯಗಳ, ಪ್ರದೇಶಗಳ ಹಾಗೂ ಅದಕ್ಕಿಂತ ಮಿಗಿಲಾಗಿ ಕಲಿಯುವ ಮಕ್ಕಳ ಸ್ವಂತ ಭಾಷೆಗಳೇ ಆಗಿರಬೇಕು. ಆದರೆ

ಕಲಿಯುವುದಕ್ಕೆ ಆಯ್ಕೆ ಮಾಡಿಕೊಳ್ಳುವ ಭಾಷೆ ಈ ಮೂರು ಭಾಷೆಗಳಲ್ಲಿ ಎರಡು ಭಾಷೆಗಳು ಭಾರತೀಯ ಭಾಷೆಗಳೇ ಆಗಿರಬೇಕು.

**10.** ಪ್ರಪಂಚದ ಹಲವಾರು ಮುಂದುವರೆದ ದೇಶಗಳಿಗೆ ಅವರವರ ಭಾಷೆ, ಸಂಸ್ಕೃತಿ ಮತ್ತು ಪರಂಪರೆಗಳ ಹಿನ್ನೆಲೆಯಲ್ಲಿ ಶಿಕ್ಷಣ ಪಡೆಯುವುದರಲ್ಲಿ ಯಾವ ಅಡ್ಡಿಯೂ ಕಂಡುಬರುವುದಿಲ್ಲ. ಅದರಂತೆ ಭಾರತೀಯ ಭಾಷೆಗಳು ಪ್ರಪಂಚದ ಅತ್ಯಂತ ಸಮೃದ್ಧವಾದ, ಅತ್ಯಂತ ವೈಜ್ಞಾನಿಕವಾದ, ಅತ್ಯಂತ ಸುಂದರವಾದ ಹಾಗೂ ಅತ್ಯಂತ ಅಭಿವ್ಯಕ್ತಿ ಸಾಮರ್ಥ್ಯವುಳ್ಳ ಭಾಷೆಗಳ ಸಾಲಿನಲ್ಲಿ ತಮ್ಮದೇ ಆದ ಮನ್ನಣೆಯನ್ನು ಪಡೆದಿವೆ.

**11.**ಗ್ರೇಡ್ **6-8** ರಲ್ಲಿ " ಒಂದು ಭಾರತ-ಶ್ರೇಷ್ಠ ಭಾರತ" ಕಲ್ಪನೆಯಡಿ ಪ್ರತಿಯೊಬ್ಬ ವಿದ್ಯಾರ್ಥಿಯೂ " ಭಾರತೀಯ ಭಾಷೆಗಳು" ಎಂಬ ಉಲ್ಲಾಸಕರವಾದ ಯೋಜನೆ / ಚಟುವಟಿಕೆಗಳಲ್ಲಿ ಭಾಗವಹಿಸತಕ್ಕದ್ದು. ಎನ್ನುವ ಮಾತುಗಳು ಸ್ಥಳೀಯ ಭಾಷೆಯ ಬಗೆಗೆ ಒತ್ತು ನೀಡುತ್ತವೆ.

**12.**ಭಾರತದ ಶಾಸ್ತ್ರೀಯ ಅಥವಾ ಅಭಿಜಾತ ಭಾಷೆಗಳ ಮತ್ತು ಸಾಹಿತ್ಯಗಳ ಮಹತ್ವ, ಪ್ರಸ್ತುತತೆ ಹಾಗೂ ಸೊಬಗನ್ನು ಕಡೆಗಣಿಸುವಂತಿಲ್ಲ.

**13.**ಎಲ್ಲ ಭಾಷೆಗಳಿಗೆ ಸಂಬಂಧಿಸಿದ ಶಿಕ್ಷಣವನ್ನು ಹೊಸ ಆಲೋಚನೆಯ ಹಾಗೂ ಅನುಭವಭರಿತವಾದ ಹಿನ್ನೆಲೆಯಲ್ಲಿ ಗಾಢವಾಗಿಸುವ ಪ್ರಯತ್ನ ಮಾಡಲಾಗುವುದು. ಆ ಕುರಿತು ಓದನ್ನು ಸರಳಗೊಳಿಸುವ ಹಾಗೂ ಆ್ಯಪ್ಸ್ ಮೂಲಕ ಸಾಧರಪಡಿಸುವ ವಿಧಾನವನ್ನು ಬಳಸಿಕೊಳ್ಳಲಾಗುವುದು.

**14.** ಭಾರತೀಯ ಸಂಜ್ಞಾಭಾಷೆಯನ್ನು **(Indian Sign Language-ISL)** ದೇಶಾದ್ಯಾಂತ ಪರಿನಿಷ್ಠಗೊಳಿಸಲಾಗುವುದು.

**15.**ಈ ನೀತಿಯ ಆಧಾರ ಸಿದ್ಧಾಂತ ಬೋಧನೆ ಮತ್ತು ಕಲಿಕೆ ಎರಡರಲ್ಲಿಯೂ ಬಹುಭಾಷಿಕತೆ ಮತ್ತು ಭಾಷಾಶಕ್ತಿ ಇವುಗಳಿಗೆ ಪ್ರೋತ್ಸಾಹ ನೀಡುವುದು.

**16.**ಎಲ್ಲಾ ಬಗೆಯ ಪಠ್ಯಕ್ರಮ, ಬೋಧನಾ ಕ್ರಮ ಮತ್ತು ನೀತಿ ಇವುಗಳಲ್ಲೆಲ್ಲ ವೈವಿಧ್ಯ ಮತ್ತು ಸ್ಥಳೀಯ ಸಂದರ್ಭಗಳಿಗೆ ಗೌರವ ಕೊಡುವುದು.

**17.**ಬೋಧಕ ಶಿಕ್ಷಣಕ್ಕೆ ಬಹುಕೌಶಲ್ಯ ಹಾಗೂ ಉನ್ನತ ಮಟ್ಟದ ಅವಶ್ಯಕತೆ ಇರುವುದರಿಂದ ವಿಶ್ವವಿದ್ಯಾನಿಲಯಗಳು ಹಾಗೂ ಕಾಲೇಜುಗಳು ಇತರ ವಿಷಯಗಳ ಜೊತೆಗೆ ಭಾರತೀಯ ಭಾಷೆಗಳನ್ನು ಹಾಗೂ ಸಾಹಿತ್ಯ ವಿಭಾಗಗಳ ಸಹಭಾಗಿತ್ವದೊಂದಿಗೆ ಸಂಶೋಧನೆ ನಡೆಸುತ್ತಿದ್ದು.......... ಶಿಕ್ಷಣ ಸಂಸ್ಥೆಗಳು ಬಹುಕೌಶಲ ಸಂಸ್ಥೆಗಳಾಗಿ ಬದಲಾಗಬೇಕಾಗಿದೆ ಎನ್ನುವಲ್ಲಿ ಸ್ಥಳೀಯ ಭಾಷೆಗಳ ಸತ್ವವಡಗಿದೆ.

**18.**ಭಾರತೀಯ ಭಾಷೆಗಳನ್ನು ಕಲಿಸುವ ಸಾಮರ್ಥ್ಯ ಹೊಂದಿರುವ ಕಾಲೇಜು-ವಿಶ್ವವಿದ್ಯಾನಿಲಯಗಳ ಬೋಧಕರಿಗೆ ಅಲ್ಪಾವಧಿ/ ಧೀರ್ಘಾವಧಿಯ ಮಾರ್ಗದರ್ಶನ ಅಥವಾ ವೃತ್ತಿಪರ ಬೆಂಬಲ ನೀಡಲು ಉತ್ಸುಕವಾಗಿರುವ ಹಿರಿಯ ತಜ್ಞರು/ ನಿವೃತ್ತ ಶಿಕ್ಷಕರನ್ನು ಒಳಗೊಂಡ ರಾಷ್ಟ್ರೀಯ ಆಯೋಗವನ್ನು ಸ್ಥಾಪಿಸುವುದು .

19. ವಿಜ್ಞಾನ ಮತ್ತು ಗಣಿತಶಾಸ್ತ್ರ ಮೊದಲುಗೊಂಡು ಧ್ವನಿವಿಜ್ಞಾನ ಮತ್ತು ಭಾಷೆಗಳಿಗೆ ಸಂಬಂಧಿಸಿದಂತೆ ಸಂಶೋಧನೆ ಮತ್ತು ಜ್ಞಾನ ವೃದ್ಧಿಗೆ ಸಂಬಂಧಿಸಿದ ಪರಂಪರೆಯನ್ನು ಬಳಸಿಕೊಳ್ಳಲು ಸ್ಥಳೀಯ ಭಾಷೆಗಳನ್ನು ಅವಲಂಬಿಸುವುದು.
20. ಕೃಷಿ ಹಾಗೂ ಕೃಷಿಗೆ ಸಂಬಂಧಿಸಿದ ಶಿಕ್ಷಣದ ಅರಿವು ಮತ್ತು ಕಾನೂನು ಶಿಕ್ಷಣವು ಜಾಗತಿಕವಾಗಿ ಸ್ಪರ್ಧಾತ್ಮಕವಾಗಿರಬೇಕಿರುವ ನೆಲೆಯಲ್ಲಿ " ಭವಿಷ್ಯದ ನ್ಯಾಯವಾದಿಗಳಿಗೆ ಹಾಗೂ ನ್ಯಾಯಾಧೀಶರಿಗೆ ಶಿಕ್ಷಣ ನೀಡುವಂಥ ರಾಜ್ಯ ಮಟ್ಟದ ಸಂಸ್ಥೆಗಳು ಇಂಗ್ಲಿಷ್ ಹಾಗೂ ಆಯಾ ರಾಜ್ಯದ ಭಾಷೆಯಲ್ಲಿ ಶಿಕ್ಷಣ ನೀಡಲು ದ್ವಿಭಾಷಾ ನೀತಿಯನ್ನು ಅನುಸರಿಸುವ ಕುರಿತು ಚಿಂತಿಸಬೇಕಿದೆ." ಎನ್ನುವ ಕಡೆ ಸ್ಥಳೀಯ ಭಾಷೆಗೆ ಒತ್ತು ನೀಡಿಕೆ.
21. ವಯಸ್ಕ ಶಿಕ್ಷಣ ಹಾಗೂ ಜೀವಾವಧಿ ಕಲಿಕೆ ಸಾಧಿತವಾಗಬೇಕಾದರೆ ತಳಮಟ್ಟದ ಸಾಕ್ಷರತೆ ಸಾಧಿಸುವುದು ಮುಖ್ಯ. ಶಿಕ್ಷಣ ಗಳಿಸುವುದು ಹಾಗೂ ಅದರ ಮೂಲಕ ಜೀವನೋಪಾಯ ಕಲ್ಪಿಸುವುದು ಪ್ರತಿ ನಾಗರಿಕನ ಮೂಲಭೂತ ಹಕ್ಕು ಎಂದು ಪರಿಗಣಿಸುವುದು.
22. ಭಾರತವು ಸಂಸ್ಕೃತಿಯ ಗುಪ್ತನಿಧಿಯಾಗಿದೆ. ಸಾವಿರಾರು ವರ್ಷಗಳಿಂದ ಅಭಿವೃದ್ಧಿಪಡಿಸಿದ ಬೃಹತ್ ಭಂಢಾರ ಇದಾಗಿದೆ. ಕಲೆ, ಸಾಹಿತ್ಯ ಕೃತಿಗಳು ಸಂಪ್ರದಾಯಗಳು, ಭಾಷಾಭಿವ್ಯಕ್ತಗಳು.......ಸಂಪತ್ತಾಗಿ ಪರಿಣಮಿಸಬೇಕಾಗಿದೆ.. ಎನ್ನುವಲ್ಲಿ ಸಳೀಯ ಭಾಷೆಗೆ ಮಹತ್ವವಿದೆ.

ಈ ಮೇಲಿನ ಅಂಶಗಳಲ್ಲದೆ ಅನೇಕ ಅಂಶಗಳು ಸ್ಥಳೀಯ ಭಾಷೆಯ ನೆರಳಿನಲ್ಲಿಯೇ ತಮ್ಮ ಏಳಿಗೆಯನ್ನು ಕಂಡುಕೊಳ್ಳಬೇಕಿದೆ. ಅದನ್ನು ಬಿಟ್ಟು ರಾಷ್ಟ್ರೀಯ ಶಿಕ್ಷಣ ನೀತಿ-**2020** ತನ್ನ ಯಶಸ್ಸನ್ನು ಗಳಿಸಲಾರದು. ಹಾಗಾಗಿಯೇ ಈ ಶಿಕ್ಷಣ ನೀತಿಯ ಬಹುಮುಖ್ಯ ಆಶಯ ಮತ್ತು ಯೋಜನೆಯ ರೂಪುರೇಖೆಗಳು ಸಕಾರಗೊಳ್ಳಭೇಕಾದರೆ ಸ್ಥಳೀಯ ಭಾಷೆಯನ್ನು ಅನುಸರಿಸಿಯೇ ನಡೆಯಬೇಕು ಆದ್ದರಿಂದಲೇ ಈ ನೀತಿಯಲ್ಲಿ ಸ್ಥಳೀಯ ಭಾಷೆ ಮತ್ತು ಮಾತೃಭಾಷೆಗಳಿಗೆ ಹೆಚ್ಚು ಮಾನ್ಯತೆ ಕೊಟ್ಟಿರುವುದು ಮೇಲಿನ ಅಂಶಗಳಿಂದ ಗೋಚರವಾಗುತ್ತದೆ. ಹೀಗಿದ್ದರೂ ಈ ನೀತಿ ಸಂಪೂರ್ಣವಾಗಿ ದೋಷ ರಹಿತವಾದುದು ಎನ್ನುವಂತಿಲ್ಲ. ಇದರಲ್ಲಿಯೂ ಅನೇಕ ಮಾರ್ಪಾಡಾಗಬೇಕಾದ ಸಂಗತಿಗಳಿವೆ. ಇದೆಲ್ಲವನ್ನು ಕಾಲಾನಂತರದಲ್ಲಿ ಕಾರ್ಯಯೋಜನೆಯ ಹಂತಗಳಲ್ಲಿ ಆಗಾಗ ಮಾರ್ಪಡಿಸಿಕೊಳ್ಳಬೇಕಾದದ್ದು ಇದೆ. ಇದಕ್ಕೆ ಪೂರಕವೆಂಬಂತೆ ಕೆಲವೊಂದು ಸಲಹೆ-ಸೂಚನೆಗಳನ್ನು ಅಳವಡಿಸಿಕೊಳ್ಳುವುದು ಅಗತ್ಯವಾಗಿದೆ. ಅವು ಮುಂದಿನಂತಿವೆ.

## ಅಗತ್ಯವಾಗಿ ಅನುಸರಿಸಬೇಕಾದ ನಿಯಮಗಳು ಮತ್ತು ಅಳವಡಿಕೆಗಳು :

1. ರಾಷ್ಟ್ರೀಯ ಶಿಕ್ಷಣ ನೀತಿಯ ದೂರದರ್ಶಿತ್ವವನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವುದು. ಅಂದರೆ " ಭಾರತ ದೇಶವನ್ನು ಸುಸ್ಥಿರವಾಗಿ ಸಮಾನತಾ ಮನೋಧರ್ಮದ ಹಾಗೂ ಸ್ಪಂದನಶೀಲ ಜ್ಞಾನ ಸಮಾಜವಾಗಿ ಪರಿವರ್ತಿಸುವ ನಿಟ್ಟಿನಲ್ಲಿ ಭಾರತಿಯ ಅಸ್ಮಿತೆಯ ಮೇಲೆ ಆಧಾರಗೊಂಡಿರುವ ಶಿಕ್ಷಣ ವ್ಯವಸ್ಥೆಯೊಂದನ್ನು ಸಾಕಾರಗೊಳಿಸುವುದು ಈ ರಾಷ್ಟ್ರೀಯ ಶಿಕ್ಷಣ ನೀತಿಯ ಮಹಾನ್ ಉದ್ದೇಶವಾಗಿದೆ," ಎನ್ನುವಲ್ಲಿ ಸ್ಥಳೀಯ ಎಲ್ಲಾ ಅಂಶಗಳನ್ನು ಪರಿಗಣನೆಗೆ ತರುವುದರೊಂದಿಗೆ, ಅನುಷ್ಠಾನಗೊಳಿಸುವುದು.

2. ಮೂಲಭೂತ ಸಾಕ್ಷರತೆ ಮತ್ತು ಅಂಕಿ ಅಂಶಗಳ ಪರಿಜ್ಞಾನ ಸಾಕಾರಗೊಳ್ಳಲು ಸ್ಥಳೀಯ ಅಗತ್ಯತೆಗಳನ್ನು ಯತೇಚ್ಛವಾಗಿ ಬಳಕೆ ಮಾಡಿಕೊಳ್ಳುವುದು.
3. ಶಾಲೆಯನ್ನು ಮಧ್ಯದಲ್ಲಿಯೇ ಬಿಟ್ಟು ಹೋಗುವ ವಿದ್ಯಾರ್ಥಿಗಳ ಕಡೆಗೆ ಗಮನ ವಹಿಸುವುದು ಮತ್ತು ಸಮಸ್ಯೆಗಳನ್ನು ಅಂದಂದಿಗೆ ಪರಿಹರಿಸುವಂತೆ ಯೋಜಿಸುವುದು.
4. ಪ್ರಸ್ತುತ ಭಾರತದಲ್ಲಿ ಉನ್ನತ ಶಿಕ್ಷಣ ಎದುರಿಸುತ್ತಿರುವ ಸಮಸ್ಯೆಗಳಕಡೆಗೆ ಗಮನ ಗರಿಸುವುದು.
5. ಸ್ಥಳೀಯ ಭಾಷೆಗಳು ಮತ್ತು ಅವುಗಳ ಸಂಸ್ಕೃತಿಯಲ್ಲಿ ಅಡಗಿರುವ ಸಾಂಸ್ಕೃತಿಕ ಒಳನೋಟಗಳನ್ನು ಸಂಶೋಧನೆ ಕೈಗೊಳ್ಳುವುದರ ಮೂಲಕ ಬೆಳಕಿಗೆ ತರುವುದು. ಆ ಮೂಲಕ ಸ್ಥಳೀಯ ಅಶಗಳಿಗೆ ಮಹತ್ವ ಕೊಡುವಂತೆ ಮಾಡುವುದು.
6. ಜಲ್ಲಾ ಮಟ್ಟದಲ್ಲಿ ಸ್ಥಳೀಯ ಭಾಷೆ ಮತ್ತು ಸಂಸ್ಕೃತಿಯನ್ನು ಎತ್ತಿ ಹಿಡಿಯಲು ಸಾಂಸ್ಥಿಕ ಆಯೋಗಗಳನ್ನು ಸಾಪಿಸುವುದು.
7. ಸ್ಥಳೀಯ ಭಾಷೆಗಳನ್ನು ಪ್ರಾಥಮಿಕ ಶಾಲೆಯ ಕಲಿಕೆಯಲ್ಲಿ ಕಡ್ಡಾಯಗೊಳಿಸಲು ಕ್ರಮ ಕೈಗೊಳ್ಳಬೇಕು.
8. ಭಾರತದ ಸರ್ವತೋಮುಖ ಅಭಿವೃದ್ಧಿಗೆ ಮಹತ್ವದ ಪಾತ್ರ ನಿರ್ವಹಿಸುವ ಇಂಜಿನಿಯರಿಂಗ್, ತಂತ್ರಜ್ಞಾನ. ನಿರ್ವಹಣೆ, ವಾಸ್ತುಶಾಸ್ತ್ರ, ನಗರ ಯೋಜನೆ, ಔಷಧಾಲಯ, ಹೋಟೆಲ್ ನಿರ್ವಹಣೆ, ಅಡುಗೆ ತಂತ್ರಜ್ಞಾನ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಸ್ಥಳೀಯ ಭಾಷೆಗಳಲ್ಲಿ ಅನುವಾದ ಕೃತಿಗಳನ್ನು ಹೊರತರಲು ಕ್ರಮ ಕೈಗೊಳ್ಳುವುದು. ಆ ಮೂಲಕ ಸ್ಥಳೀಯ ಭಾಷೆಗಳಿಗೆ ಉತ್ತೇಜನ ಕೊಡುವುದು.

ಈ ಮೇಲಿನ ಅಂಶಗಳು ಸ್ಥಳೀಯ ಅಗತ್ಯತೆಯನ್ನು ಪೂರೈಸುವುದರೊಂದಿಗೆ ಸಮಗ್ರ ಹಾಗೂ ಸುಸ್ಥಿರ ಅಭಿವೃದ್ಧಿಯ ಕಡೆಗೆ ಸಮಾಜವನ್ನು ಕೊಂಡೊಯ್ಯುತ್ತವೆ. ಹಾಗಾಗಿ ಯಾವುದೇ ಒಂದು ಯೋಜನೆ ಕಾರ್ಯಗತವಾಗಲು ಈ ಎಲ್ಲಾ ಅಂಶಗಳು ಬಹು ಮುಖ್ಯವಾಗುತ್ತವೆ ಎಂದೆನ್ನಬಹುದು.

## ಉಪಸಂಹಾರ :

ರಾಷ್ಟ್ರೀಯ ಶಿಕ್ಷಣ ನೀತಿ-**2020** ವಾಸ್ತವವಾಗಿ ಈ **21**ನೆಯ ಶತಮಾನದ ಮೊದಲ ಭಾರತೀಯ ಶಿಕ್ಷಣ ನೀತಿಯಾಗಿದ್ದು. ಭಾರತದ ಪ್ರಾದೇಶಿಕ ಹಾಗೂ ಜಾಗತಿಕ ಅಗತ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ರೂಪಿತವಾದ ಬಹು ಮುಖ್ಯವಾದ ಯೋಜನೆಯಾಗಿದೆ. ಅಲ್ಲದೆ ಭಾರತವು ಜಗತ್ತಿನ ಸಾಂಸ್ಕೃತಿಕ ರಾಯಭಾರಿಯಂತೆ ಹಲವು ಅಂಶಗಳ ಮಿಶ್ರಣವಾಗಿರುವ ಹಿನ್ನೆಲೆಯಲ್ಲಿ ಅದರ ಅಸ್ಮಿತೆ ಮತ್ತು ಅನನ್ಯತೆಯನ್ನು ಉಳಿಸಿ ಬೆಳೆಸಿಕೊಂಡು ಹೋಗಬೇಕಾದರೆ ಅದರ ಸ್ಥಳೀಯ ಅಗತ್ಯತೆ ಮತ್ತು ಮಹತ್ವವನ್ನು ಮೈಗೂಡಿಸಿಕೊಂಡು ಸಾಗಬೇಕಾಗುತ್ತದೆ ಹಾಗಾಗಿ ಪ್ರಸ್ತುತ ರಾಷ್ಟ್ರೀಯ ಶಿಕ್ಷಣ ನೀತಿಯು ಈ ಎಲ್ಲಾ ಅಂಶಗಳನ್ನು ತನ್ನ ತೆಕ್ಕೆಗೆ ತೆಗೆದುಕೊಡು ಕಾರ್ಯಗತವಾದರೆ

ಭಾರತವೊಂದು ಸುಶೀಕ್ಷತ ರಾಷ್ಟ್ರವಾಗುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂಬುದನ್ನು ಮೇಲಿನ ವಿಶ್ಲೇಷಣೆಯಲ್ಲಿ ಕಂಡುಕೊಳ್ಳಬಹುದಾಗಿದೆ .

## ಪರಾಮರ್ಶನ ಕೃತಿಗಳು :

1. ರಾಷ್ಟ್ರೀಯ ಶಿಕ್ಷಣ ನೀತಿ - **2020** (ಕನ್ನಡ ಅನುವಾದ)- ಶಿಕ್ಷಣ ಸಚಿವಾಲಯ, ಭಾರತ ಸರ್ಕಾರ.
2. ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ, ಲೇಖಕರು - ಡಾ. ಲೋಕೇಶ .ಆರ್, ಮಣಿಪ್ರಕಾಶನ, ಮೈಸೂರು, ಪ್ರಥಮ ಮುದ್ರಣ -**2020**